ಶ್ರೀ ಕೆ.ಜೆ. ಜಾರ್ಜ್.—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಈಗತಾನೆ ಈ ವಿಚಾರವನ್ನು ನನ ಗವಂನಕ್ಕೆ ತಂದಿದ್ದಾರೆ. ಈ ಕೂಡಲೇ ಇದರ ಬಗ್ಗೆ ಕೂಲಂಕುಷ ತನಿಖೆ ಮಾಡುವುದಕ್ಕೆ ಆದೇಶ ಕೊಡುತ್ತೇನೆ.

ಕ.ರಾ.ರ.ಸಾ. ಸಂಸ್ಥೆಯು ಅನುಭವಿಸುತ್ತಿರುವ ನಷ್ಟ

೨೦೪. ಶ್ರೀ ಎಲ್. ಆರ್. ಶಿವರಾಮೆಗೌಡ (ನಾಗಮಂಗಲ).—ಮಾನ್ಯ ಆಹಾರ, ನಾಗರೀಕ ಸರಬರಾಜು ಮತ್ತು ಸಾರಿಗೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ೧೯೭೭ರ ಮಾರ್ಚ್ ೧ ರಿಂದ ೧೯೮೪ರ ಜೂನ್ ೩೦ರ ವರೆಗೆ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಅನುಭವಿಸಿದ ನಷ್ಟ ಎಷ್ಟು ? (ವರ್ಷವಾರು ವಿವರಕೊಡುವುದು).

ಆ) ಮೇಲ್ಕಂಡ ಅವಧಿಯಲ್ಲಿ ಕೆ.ಎಸ್.ಆರ್.ಟಿ.ಸಿ.ಯು ಎಷ್ಟು ಸಾರಿ ಪ್ರಯಾಣ ದರವನ್ನು ಹೆಚ್ಚಿಸಿದೆ ? (ಶೇಕಡಾವಾರು ವಿವರಗಳನ್ನು ಕೊಡುವುದು)

ಇ) ಬೆಂಗಳೂರು ನಗರ ಸಾರಿಗೆ ಸಂಸ್ಥೆಯು ಅನುಭವಿಸುತ್ತಿರುವ ನಷ್ಟದ ಮೊತ್ತವೇನು ?

ಶ್ರೀ ಕೆ. ಜೆ. ಜಾರ್ಜ್ (ಆಹಾರ, ನಾಗರೀಕ ಸರಬರಾಜು ಮತ್ತು ಸಾರಿಗೆ ರಾಜ್ಯ ಸಚಿವರು).—

ಅ) ಏಪ್ರಿಲ್ ೧ ರಿಂದ ಮಾರ್ಚ್ ೩೧ಕ್ಕೆ ಅಂತ್ಯವಾಗುವ ೧೯೮೬-೮೮ ಮತ್ತು ೧೯೮೮-೮೯ ಆರ್ಥಿಕ ಸಾಲುಗಳಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಕ್ರಮವಾಗಿ ರೂ. ೪೯೯.೫೯ ಲಕ್ಷ ಮತ್ತು ೫೪೦೦.೦೫ ಲಕ್ಷ ರೂಪಾಯಿಗಳ ನಷ್ಟವನ್ನು ಅನುಭವಿಸಿದೆ.

ಆ) ಈ ಅವಧಿಯಲ್ಲಿ ಪ್ರಯಾಣ ದರವನ್ನು ಹೆಚ್ಚಿಸಿರುವುದಿಲ್ಲ.

ಇ) ಬೆಂಗಳೂರು ನಗರ ಸಾರಿಗೆ ವಿಭಾಗವು ೧೯೮೮-೮೯ನೇ ಆರ್ಥಿಕ ವರ್ಷದಲ್ಲಿ ೧೮೬೬-೫೬ ಲಕ್ಷ ರೂ. ಗಳ ನಷ್ಟವನ್ನು ಅನುಭವಿಸಿದೆ.

ಶ್ರೀ ಎಲ್.ಆರ್. ಶಿವರಾಮೇಗೌಡ.—ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ತಮ್ಮ ಉತ್ತರದಲ್ಲಿ ಸಾರಿಗೆ ಸಂಸ್ಥೆಯಲ್ಲಿ ೫ ಕೋಟಿ ರೂಪಾಯಿ ನಷ್ಟವಾಗಿದೆ ಎಂದು ಹೇಳಿದ್ದಾರೆ. ಈ ನಷ್ಟದ ಪೈಕಿ ಕೇವಲ ಬೆಂಗಳೂರು ನಗರ ಸಾರಿಗೆ ವಿಭಾಗದಲ್ಲೇ ಸುಮಾರು ೨ ಲಕ್ಷ ರೂಪಾಯಿ ನಷ್ಟವಾಗಿದೆ ಎಂದು ತಿಳಿಸಿದ್ದಾರೆ. ಇನ್ನು ಇಡೀ ರಾಜ್ಯದಲ್ಲಿ ಸುಮಾರು ಮೂರುವರೆ ಲಕ್ಷ ರೂಪಾಯಿಗಳ ನಷ್ಟವಾಗಿದೆ ಎಂದು ಅವರೇ ಒಪ್ಪಿಕೊಂಡಿದ್ದಾರೆ. ಅಂದರೆ ಕೇವಲ ೪೦ ಲಕ್ಷ ಜನಸಂಖ್ಯೆ ಇರತಕ್ಕ ಬೆಂಗಳೂರು ಒಂದರಲ್ಲೇ ಸುಮಾರು ೮೦ ಪರ್ಸೆಂಟ್ ನಷ್ಟವುಂಟಾಗುತ್ತಿದೆ ಎಂದು ಅರ್ಥವಾಗುತ್ತಿದೆ. ಆದ್ದರಿಂದ ಈರೀತಿಯ ನಷ್ಟವನ್ನು ತಪ್ಪಿಸಲು ಬಿ.ಟಿ.ಎಸ್. ಮತ್ತು ಕೆ.ಎಸ್.ಆರ್.ಟಿ.ಸಿ.ಯನ್ನು ಬೇರೆ ಬೇರೆ ಮಾಡಿ ನಮ್ಮ ಹಳ್ಳಿಗಳ ಕಡೆಗೆ ಬಸ್ ಸೌಲಭ್ಯವನ್ನು ಕಲ್ಪಿಸಿಕೊಡುತ್ತೀರಾ ?

ಶ್ರೀ ಕೆ. ಜೆ. ಜಾರ್ಜ್.—ಈರೀತಿಯ ನಷ್ಟ ಕೇವಲ ಬಿ.ಟಿ.ಎಸ್. ಬಸ್‌ನಲ್ಲಿ ಮಾತ್ರವಲ್ಲ. ಇಡೀ ದೇಶದಲ್ಲಿ ಅಂದರೆ ಬೊಂಬಾಯಿ, ದೆಹಲಿ, ತಮಿಳ್ನಾಡಂ ಹೀಗೆ ಎಲ್ಲಾ ಪ್ರಮುಖ ನಗರಗಳ ಸಾರಿಗೆ ಸಂಸ್ಥೆಗಳೂ ಕೂಡ ನಷ್ಟದಲ್ಲಿಯೇ ನಡೆಯಂತ್ತಿವೆ. ಅಂತರಾಷ್ಟ್ರೀಯ ಮಟ್ಟದಲ್ಲಿ ಕೆಗೆದುಕೊಂಡರೂ ಕೂಡ ಪಟ್ಟಣಗಳಲ್ಲಿರುವ ಸಾರಿಗೆ ಸಂಸ್ಥೆಗಳು ನಷ್ಟವನ್ನು ಅನುಭವಿಸುತ್ತಿವೆ. ಈ ಬಿ.ಟಿ.ಎಸ್. ಬಸ್ಸುಗಳು ಇರುವುದು ಕೇವಲ ಬೆಂಗಳೂರಿನ ೪೦ ಲಕ್ಷ ಜನರಿಗೆ ಮಾತ್ರವಲ್ಲ. ಈ ಬೆಂಗಳೂರು ಕರ್ನಾಟಕದ ರಾಜಧಾನಿಯಾಗಿರುವುದರಿಂದ ಮತ್ತು ಸುಂದರವಾದ ನಗರವಾಗಿರುವುದರಿಂದ ಪ್ರತಿದಿನ ಗ್ರಾಮಾಂತರ ಪ್ರದೇಶಗಳಿಂದ ಹತ್ತಾರು ಸಾವಿರ ಜನ ಬಂದು ಹೋಗುತ್ತಾರೆ ಮತ್ತು ಹತ್ತಾರು ಸಾವಿರ ಜನ ಪ್ರವಾಸಿಗರೂ ಕೂಡ ಬಂದು ಹೋಗುತ್ತಾರೆ. ಗ್ರಾಮಾಂತರ ಪ್ರದೇಶಗಳಲ್ಲಿರುವಂತೆ ಬೆಂಗಳೂರಂ ನಗರದಲ್ಲೂಕೂಡ ಬಡವರು ಮತ್ತು ಮಧ್ಯಮವರ್ಗದ ಜನ ಯಾರಿದ್ದಾರೆ ಅವರು ಈ ನಗರಸಾರಿಗೆಯನ್ನು ಉಪಯೋಗಿಸಿಕೊಳ್ಳುತ್ತಿದ್ದಾರೆ. ಇದರಿಂದಾಗಿ ಇಷ್ಟು ನಷ್ಟವಾಗುತ್ತಿದೆ.

ಶ್ರೀ ಎಲ್. ಆರ್. ಶಿವರಾಮೇಗೌಡ.—ನಗರ ಪ್ರದೇಶದಲ್ಲಿರುವವರಿಗೆ ಬಸ್ಸುಗಳು ಬೇಡವೆಂದು ನಾನು ಹೇಳುತ್ತಿಲ್ಲ. ಗ್ರಾಮಾಂತರ ಪ್ರದೇಶಗಳಲ್ಲಿ ಓಡುತ್ತಿರುವ ಬಸ್ಸುಗಳಲ್ಲಿ ೬೦ ಜನ ಕೂಡುವ ಆಸನ ವ್ಯವಸ್ಥೆ ಇದೆ. ಆದರೆ ಸುಮಾರು ೧೪೦-೧೫೦ ಜನ ಬಸ್ಸಿನ ಒಳಗೆ ಮತ್ತು ಟಾಪ್ ಮೇಲೆ ಕಂಠಿತುಕೊಂಡು ಪ್ರಯಾಣ ಮಾಡುತ್ತಿದ್ದಾರೆ. ನಾನು ತಮ್ಮನ್ನು ಕೇಳಿದಾಗ ಈಗ ಸಾರಿಗೆ ಸಂಸ್ಥೆ ನಷ್ಟದಲ್ಲಿದೆ, ಇನ್ನು ಸ ಲ ದಿವಸ ತಡೆಯಿರಿ, ಆನಂತರ ಗ್ರಾಮಾಂತರ ಪ್ರದೇಶಕ್ಕೆ ಹೆಚ್ಚು ಹೆಚ್ಚು

ಬಸ್ಸುಗಳನ್ನು ಹಾಕುತ್ತೇವೆ ಎಂದು ಹೇಳಿದಿರಿ. ನಾನಾನರೂ ತಮಗೆ ಹೇಳುತ್ತೇನೆ. ಈ ಕೆ.ಎಸ್.ಆರ್.ಟಿ.ಸಿ. ಮತ್ತು ಬಿ.ಟಿ.ಎಸ್‌ಅನ್ನು ಬೇರೆ ಬೇರೆ ಮಾಡಿದರೆ ಆಗತಕ್ಕ ನಷ್ಟ ಕಡಿಮೆಯಾಗಿ ಗ್ರಾಮಾಂತರ ಪ್ರದೇಶದ ಜನರಿಗೆ ಹೆಚ್ಚು ಬಸ್ಸಿನ ಸೌಲಭ್ಯವನ್ನು ಒದಗಿಸಿಕೊಟ್ಟಂತಾಗುತ್ತದೆ,

ಇನ್ನೊಂದು ವಿಚಾರ ಎಂದರೆ, ಮಾನ್ಯ ಹಿಂದ್ಯರವರು ಹಿಂದೆ ಸಾರಿಗೆ ಮಂತ್ರಿಗಳಾಗಿದ್ದಾಗ ಮಂಡ್ಯ ಜಿಲ್ಲೆಯಲ್ಲಿ ಬಸ್ ಮಾರ್ಗಗಳನ್ನು ರಾಷ್ಟ್ರೀಕರಣ ಮಾಡುತ್ತೇವೆಂದು ಹೇಳಿದ್ದರು. ಗ್ರಾಮಾಂತರ ಪ್ರದೇಶದಿಂದ ಪಟ್ಟಣ ಪ್ರದೇಶಕ್ಕೆ ಬರುವ ಬಸ್ಸುಗಳಿಗೆ ಜನ ಬರಬೇಕಾದರೆ ಸುಮಾರು ೮-೧೦ ಕಿಲೋಮೀಟರ್‌ನಷ್ಟು ದೂರ ನಡೆದುಕೊಂಡು ಬರಬೇಕಾಗಿದೆ. ಆದ್ದರಿಂದ ನಮ್ಮ ಮಂಡ್ಯ ಜಿಲ್ಲೆಯ ಬಸ್ ಮಾರ್ಗಗಳನ್ನು ಯಾವಾಗ ರಾಷ್ಟ್ರೀಕರಣ ಮಾಡುತ್ತೀರಿ ಎಂದು ದಯವಿಟ್ಟು ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಜೆ. ಜಾರ್ಜ್,—ಮಾನ್ಯ ಸದಸ್ಯರ ಕಳಕಳಿ ನಮಗೆ ಗೊತ್ತಿದೆ. ಗ್ರಾಮಾಂತರ ಪ್ರದೇಶದಲ್ಲಿ ಸಾಕಷ್ಟು ಬಸ್‌ನ ಸೌಲಭ್ಯ ಇಲ್ಲ ಎಂದು ಸರ್ಕಾರದ ಗಮನಕ್ಕೆ ಬಂದಿದೆ. ಈ ವಿಚಾರಕ್ಕೆ ಸಂಬಂಧ ಪಟ್ಟಂತೆ ನಾವು ಒಂದು ಸರ್ವೆ ಕಾರ್ಯವನ್ನು ಮಾಡಿಸುತ್ತಿದ್ದೇವೆ. ಮಂಡ್ಯ ಜಿಲ್ಲೆಯ ರಾಷ್ಟ್ರೀಕರಣ ವಿಚಾರವೂ ಕೂಡ ನಮ್ಮ ಮುಂದಿದೆ. ಇನ್ನು ಕೆಲವೇ ದಿವಸಗಳಲ್ಲಿ ನಮ್ಮ ಸರ್ಕಾರ ಟ್ರಾನ್ಸ್‌ಪೋರ್ಟ್ ನೀತಿಯನ್ನು ತಿದ್ದುಪಡಿ ಮಾಡಿ ಪ್ರಕಟಿಸುವುದರಲ್ಲಿದೆ. ಆ ಸಂದರ್ಭದಲ್ಲಿ ಮಾನ್ಯ ಸದಸ್ಯರು ನೀಡಿರತಕ್ಕ ಸಲಹೆಗಳನ್ನು ಗಮನದಲ್ಲಿಟ್ಟುಕೊಂಡು ಅವುಗಳನ್ನು ಪರಿಶೀಲಿಸಿ ನಮ್ಮ ಟ್ರಾನ್ಸ್‌ಪೋರ್ಟ್ ನೀತಿಯನ್ನು ಪ್ರಕಟಿಸುತ್ತೇವೆಂದು ತಿಳಿಸಬಯಸುತ್ತೇನೆ.

ಶ್ರೀ ಮದನ ಗೋಪಾಲನಾಯಕ್.— ಮಾನ್ಯ ಅಧ್ಯಕ್ಷರೇ, ಈಗಾಗಲೇ ಮಾನ್ಯ ಮಂತ್ರಿಗಳು ನಮ್ಮ ಮಾನ್ಯ ಸದಸ್ಯರು ಕೇಳಿದ ಪ್ರಶ್ನೆಗಳಿಗೆ ಗ್ರಾಮಾಂತರ ಪ್ರದೇಶಗಳಲ್ಲಿ ಬಸ್‌ಗಳಲ್ಲಿ ಕೈಪಾಸಿಟಿಗೆ ಮೀರಿ ಟಾಪ್‌ನಲ್ಲಿ ಕುಳಿತುಕೊಂಡು ಜನರು ಪ್ರಯಾಣ ಮಾಡುವಷ್ಟರಮಟ್ಟಿಗೆ ಇದ್ದರೂ ಆ ಭಾಗಗಳಲ್ಲಿ ಓಡಾಡುತ್ತಿದ್ದ ಬಸ್‌ಗಳನ್ನು ಕಲೆಕ್ಷನ್ ಆಗುತ್ತಿಲ್ಲವೆಂದು ಕ್ಯಾನ್‌ಸಲ್ ಮಾಡಿರುತ್ತಾರೆಂದು ಹೇಳಿದರು ಇಷ್ಟೊಂದು ಹೆಚ್ಚಿನ ಪ್ರಮಾಣದಲ್ಲಿ ಬರತಕ್ಕಂಥ ಕಲೆಕ್ಷನ್ ಎಲ್ಲಿ ಹೋಗುತ್ತದೆ ? ಅದರಲ್ಲೂ ರಾಜ್ಯದ ಗುಲ್ಬರ್ಗಾ ಜಿಲ್ಲೆಯ ಬಗ್ಗೆ ಏನು ವ್ಯವಸ್ಥೆ ಮಾಡುತ್ತೀರೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಜೆ. ಜಾರ್ಜ್.— ಮಾನ್ಯ ಅಧ್ಯಕ್ಷರೇ, ಈ ವಿಚಾರ ನಮ್ಮ ಸರ್ಕಾರದ ಗಮನಕ್ಕೆ ಬಂದಿದೆ ಅದಕ್ಕಾಗಿ ಚಿಕ್ಕಿಂಗ್ ವ್ಯವಸ್ಥೆ ಏನು ಇರುತ್ತದೆ ಅದನ್ನು ತೀವ್ರಗೊಳಿಸಿದ್ದೇವೆ. ಮತ್ತು ಮಾನ್ಯ ಸದಸ್ಯರು ಹೇಳಿದಂಥ ಬಸ್ ಸೌಕರ್ಯ ಏನು ಇದೆ ಅದನ್ನು ಪರಿಶೀಲನೆ ಮಾಡುತ್ತೇನೆ.

ಶ್ರೀಮತಿ ದಮಯಂತಿ ಬೋರೇಗೌಡ.— ಮಾನ್ಯ ಅಧ್ಯಕ್ಷರೇ, ಸರ್ಕಾರಿ ಬಸ್‌ಗಳಿಗೆ ಸಾಕಷ್ಟು ಸಂಖ್ಯೆಯಲ್ಲಿ ಜನ ಬರುತ್ತಿದ್ದರೂ ಕೂಡ ಗ್ರಾಮಾಂತರ ಪ್ರದೇಶದಲ್ಲಿ ಓಡಾಡತಕ್ಕಂಥ ಬಸ್‌ಗಳನ್ನು ಕ್ಯಾನ್ಸಲ್ ಮಾಡಿದ್ದಾರೆ. ಇದಕ್ಕೆ ಕಾರಣ ತಿಳಿಸುತ್ತೀರಾ ?

ಶ್ರೀ ಕೆ. ಜೆ. ಜಾರ್ಜ್.— ಮಾನ್ಯ ಅಧ್ಯಕ್ಷರೇ, ಈಗಾಗಲೇ ಉತ್ತರವನ್ನು ಕೊಟ್ಟಿದ್ದೇನೆ. ಈ ವಿಚಾರ ನಮ್ಮ ಗಮನಕ್ಕೆ ಬಂದಿದ್ದು ಚೆಕ್ಕಿಂಗ್ ಸಿಸ್ಟಮನ್ನು ತೀವ್ರಗೊಳಿಸುವುದಕ್ಕೆ ಇಲಾಖೆಗೆ ಆದೇಶವನ್ನು ನೀಡಿದ್ದೇನೆ.

ಶ್ರೀಮತಿ ಚಂದ್ರಪ್ರಭಾ ಅರಸ್.— ಮಾನ್ಯ ಅಧ್ಯಕ್ಷರೇ ಗ್ರಾಮಾಂತರ ಪ್ರದೇಶದಲ್ಲಿ ಬಸ್‌ನ ಸೌಕರ್ಯವಿಲ್ಲದೆ ಬಹಳವಾಗಿ ಜನಸಾಮಾನ್ಯರಿಂದ ಮನವಿಗಳು ಬರುತ್ತಿವೆ. ಸಾರಿಗೆ ಮಂತ್ರಿಗಳನ್ನು ಕೇಳಿಕೊಳ್ಳುವುದೇನೆಂದರೆ ಹಲವಾರು ಏರಿಯಾಗಳನ್ನು ರಾಷ್ಟ್ರೀಕರಣ ಮಾಡಿದ್ದರಿಂದ ಪ್ರತಿಭಟನೆಯೂ ಕೂಡ ಬಂದಿದೆ. ಆದರೂ ಸಾಕಷ್ಟು ಬಸ್‌ಗಳನ್ನು ಒದಗಿಸಲು ಸಾಧ್ಯವಾಗಲಿಲ್ಲ. ಆದ್ದರಿಂದ ರಾಜ್ಯದ ಎಲ್ಲಾ ಸಾರಿಗೆ ವ್ಯವಸ್ಥೆಯನ್ನು ಖಾಸಗೀಕರಣ ಮಾಡುವ ವಿಚಾರ ಸರ್ಕಾರದ ಮುಂದಿದೆಯೇ ? ಅಥವಾ ರಾಜ್ಯದ ಸ್ಟೇಟ್ ಹೈವೆಯನ್ನು ಇಟ್ಟುಕೊಂಡು ಗ್ರಾಮಾಂತರ ಪ್ರದೇಶಗಳಲ್ಲಿ ಖಾಸಗಿ ಬಸ್‌ಗಳು ಓಡಾಡಲು ಅವಕಾಶ ಮಾಡುವಂಥ ವ್ಯವಸ್ಥೆ ಸರ್ಕಾರದ ಮುಂದೆ ಇದೆಯೇ ? ಇದರ ಬಗ್ಗೆ ಕ್ರಮ ತೆಗೆದುಕೊಂಡು ಗ್ರಾಮಾಂತರ ಪ್ರದೇಶದ ಜನರಿಗೆ ಬಸ್ ಸೌಕರ್ಯವನ್ನು ಕೊಡುವುದಕ್ಕೆ ಪ್ರಯತ್ನ ಮಾಡುತ್ತೀರಾ ಎಂದು ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಜೆ. ಜಾರ್ಜ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಹೇಳಿದಂತೆ ಈ ಸರ್ಕಾರದ ಮುಂದೆ ಯಾವುದೇ ಖಾಸಗಿ ವಿಚಾರವಿಲ್ಲ. ಮುಂದೆ ಮಾನ್ಯ ಸದಸ್ಯಣಿಯವರು ಹೇಳಿದ ಸಲಹೆಯನ್ನು ಗಮನದಲ್ಲಿಟ್ಟುಕೊಂಡು ಅವನ್ನು ಪರಿಶೀಲನೆ ಮಾಡುತ್ತೇನೆ.